# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್(ಪಿ.ಸಿ.) ಸಂಖ್ಯೆ: 06/2022

ಪಿಡಬ್ಲ್ಯೂ: 01
ಸಿಡಬ್ಲ್ಯೂ: 01

**ದಿನಾಂಕಃ 12-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ಹೆಚ್.ಕೆ. ನೇತ್ರ |
| ಗಂಡನ ಹೆಸರು | ಃ ಜಯರಾಮಪ್ಪ |
| ವಯಸ್ಸು | ಃ 43 ವರ್ಷ |
| ಉದ್ಯೋಗ | ಃ ಗೃಹಿಣಿ |
| ವಾಸ ಸ್ಥಳ | ಃ ಹಿರಿಯೂರು |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

ರಾಷ್ಟ್ರೀಯ ಹೆದ್ದಾರಿ **150** ಕ್ಕೆ ಹೊಂದಿಕೊಂಡಂತೆ ನನ್ನ ಹೆಸರಿನಲ್ಲಿ ಹಿರಿಯೂರಿನ ಕಸಬಾ ವ್ಯಾಪ್ತಿಯಲ್ಲಿ ಸರ್ವೆ ನಂ.**372/1** ಮತ್ತು ಸರ್ವೆ ನಂ.**13** ಇವುಗಳಲ್ಲಿ ಜಮೀನುಗಳು ಇದ್ದು ಆ ಪೈಕಿ ಸರ್ವೆ ನಂ.**372/1** ರಲ್ಲಿ **21** ಗುಂಟೆ ಹಾಗೂ ಸರ್ವೆ ನಂ.**13** ರಲ್ಲಿ **30** ಗುಂಟೆ ಜಮೀನನ್ನು ಸದರಿ ರಾಷ್ಟ್ರೀಯ ಹೆದ್ದಾರಿಯ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಆ ಕುರಿತು ನಮಗೆ ಅವಾರ್ಡ್ ನೋಟಿಸ್ ನೀಡಲಾದ ಬಗ್ಗೆ ಫೋನ್ ಮಾಡಿ ವೀರೇಶ್ ಕುಮಾರ್ ಎನ್ನುವವರು ತಿಳಿಸಿದರು. ಆ ಬಗ್ಗೆ ದಿನಾಂಕ **25–09–2021** ರಂದು ನಾನು ಚಳ್ಳಕೆರೆ ರಸ್ತೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ಕಛೇರಿಗೆ ವಿಚಾರಿಸಲೆಂದು ಹೋಗಿದ್ದೆ. ಅಲ್ಲಿ ವೀರೇಶ್ ಇವರು ಅವಾರ್ಡ್ ನೋಟೀಸ್ ನೀಡಲಾಗಿದೆ ಆ ವಿಷಯವಾಗಿ ನೀವು ಮೋಹನ್ ಇವರನ್ನು ವಿಚಾರಿಸಿ ಎಂದು ತಿಳಿಸಿದರು. ಆಗ ಮೋಹನ್ ಅಲ್ಲಿ ಇರಲಿಲ್ಲ, ನಾನು ಅವರಿಗಾಗಿ ಸಂಜೆ **6.00** ರವರೆಗೆ ಕಾಯ್ದೆ, ಮುಂದೆ ಸದರಿ ಮೋಹನ್ ಕಛೇರಿಗೆ ಬಂದರು. ಸದರಿ ಮೋಹನ್ ನನ್ನ ಎರಡೂ ಜಮೀನುಗಳಲ್ಲಿ ಖರಾಬು ಬರುತ್ತಿರುವ ಕಾರಣ ಪರಿಹಾರಧನ ಸ್ವಲ್ಪ ಕಡಿಮೆಯಾಗುತ್ತದೆ ಎಂದು ನನಗೆ ತಿಳಿಸಿದರು. ಆಗ ನಾನು ನಮ್ಮ ಜಮೀನಿನಲ್ಲಿ ಖರಾಬು ಬರುವುದಿಲ್ಲ ಎಂದು ತಿಳಿಸಿದೆ.

**2.** ಮುಂದೆ ನಾನು **2–3** ದಿನಗಳ ನಂತರ ತಾಲ್ಲೂಕು ಕಛೇರಿಗೆ ಹೋಗಿ ಸಂಬಂಧಿಸಿದ ದಾಖಲೆಗಳನ್ನು ಅಂದರೆ ಖರಾಬು ಉತಾರ ಪ್ರತಿಯನ್ನು ಪಡೆದುಕೊಂಡು ಬಂದು ಸದರಿ ಮೋಹನ್ ಇವರಿಗೆ ತೋರಿಸಿದೆ. ಆ ಎರಡೂ ಜಮೀನುಗಳಲ್ಲಿ ಖರಾಬು ಇಲ್ಲದಿರುವ ಬಗ್ಗೆ ಆ ದಾಖಲೆಗಳನ್ನು ಪಡೆದಿದ್ದೇನೆ ಎಂದು ಅವರಿಗೆ ತಿಳಿಸಿದೆ. ದಿನಾಂಕ **31–08–2021** ಅವಾರ್ಡ್ ನೋಟೀಸ್ ಗಳನ್ನು ನೀಡಿ ದಾಖಲೆಗಳನ್ನು ತೆಗೆದುಕೊಂಡು ಬರುವಂತೆ ನನಗೆ ತಿಳಿಸಿದರು. ಅದರಂತೆ ನಾನು ದಿನಾಂಕ **03–09–2021** ರಂದು ದಾಖಲೆಗಳನ್ನು ಅಂದರೆ ಕ್ರಯಪತ್ರ, ಪಹಣಿ, ಇಸಿ, ಮ್ಯುಟೇಷನ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಹಾಗೂ ಸಾಲ ತೆಗೆದುಕೊಂಡಿಲ್ಲ ಎಂಬ ವಿಷಯವಾಗಿ ಎನ್.ಒ.ಸಿ., ರೂ.**100** ರ ಛಾಪಾಕಾಗದ ಹಾಗೂ ನನ್ನ

ಫೋಟೋ ಇವುಗಳನ್ನು ತೆಗೆದುಕೊಂಡು ಕಛೇರಿಗೆ ಹೋಗಿ ಮೋಹನ್ ಇವರಿಗೆ ನೀಡಿದೆ. ಆಗ ಆತ ವೀರೇಶ್ ಕುಮಾರ್ ಇವರನ್ನು ಮಾತನಾಡಿಸುವಂತೆ ನನಗೆ ತಿಳಿಸಿದ. ಆಗ ಸದರಿ ವೀರೇಶ್ ಕುಮಾರ್ ನಾವು ನಿಮಗೆ ಹೇಳಿ ಕಳುಹಿಸುತ್ತೇವೆಂದು ತಿಳಿಸಿದರು.

3. ಮುಂದೆ ದಿನಾಂಕ **12–09–2021** ರಂದು ಸಂಜೆ **6.30 –7.00** ರ ಅವಧಿಯಲ್ಲಿ ಮನ್ಸೂರ್ ಹಾಗೂ ಶಿವಶಂಕರಪ್ಪ ಎಂಬುವವರು ನಮ್ಮ ಮನೆ ಹತ್ತಿರ ಬಂದು ತಮ್ಮನ್ನು ನನಗೆ ಪರಿಚಯಿಸಿಕೊಂಡರು. ಅವರಿಬ್ಬರೂ ಭೂಸ್ವಾಧೀನವಾಗಿರುವ ನನ್ನ ಜಮೀನಿನ ಪರಿಹಾರದ ಹಣವನ್ನು ಮೋಹನ್ ಕುಮಾರ್ ಹಾಗೂ ವೀರೇಶ್ ಕುಮಾರ್ ಇವರಿಗೆ ಮಾತನಾಡಿಸಿ ಕೊಡಿಸುವುದಾಗಿ ನನಗೆ ತಿಳಿಸಿದರು. ನಾನು ಆಯಿತು ಎಂದು ಅವರಿಗೆ ಹೇಳಿದೆ. ಮುಂದೆ ದಿನಾಂಕ **13–09–2021** ರಂದು ಸಂಜೆ ಸದರಿ ಶಿವಶಂಕರಪ್ಪ ಹಾಗೂ ಮನ್ಸೂರ್ ಬಂದು ರೂ.**6** ಲಕ್ಷ ಹಣ ನೀಡಿದಲ್ಲಿ ಪರಿಹಾರಧನವನ್ನು ನನಗೆ ಕೊಡಿಸುವುದಾಗಿ ತಿಳಿಸಿದರು. ಅದರಲ್ಲಿ ವೀರೇಶ್ ಕುಮಾರ್ ಇವರಿಗೆ ರೂ.**5** ಲಕ್ಷ ಮತ್ತು ಮೋಹನ್ ಕುಮಾರ್ ಇವರಿಗೆ ರೂ.**1** ಲಕ್ಷ ಎಂದು ತಿಳಿಸಿದರು. ಆಗ ನಾನು ನಮ್ಮ ಬಳಿ ಹಣ ಇಲ್ಲ ನೀವು ಮೊದಲು ನನಗೆ ಪರಿಹಾರಧನ ಕೊಡಿಸಿರಿ ನಂತರ ನಾನು ಆ ಹಣ ನೀಡುವುದಾಗಿ ಅವರಿಗೆ ತಿಳಿಸಿದೆ. ಆಗ ಅವರಿಬ್ಬರೂ ನಾನು ಹಣ ಕೊಟ್ಟರೆ ಮಾತ್ರ ಆ ಪರಿಹಾರಧನ ನೀಡುತ್ತಾರೆ ಎಂದು ನನಗೆ ತಿಳಿಸಿದರು. ಆಗ ನಾನು ನನಗೆ ಯೋಚಿಸಲು ಸ್ವಲ್ಪ ಕಾಲಾವಕಾಶ ಬೇಕು ಎಂದು ಅವರಿಗೆ ತಿಳಿಸಿದೆ.

4. ದಿನಾಂಕ **14–09–2021** ರಂದು ಬೆಳಗ್ಗೆ **9.30** ಗಂಟೆಗೆ ಸದರಿ ಮನ್ಸೂರ್ ಹಾಗೂ ಶಿವಶಂಕರಪ್ಪ ಬಂದು ಸಾಹೇಬರು ಕೇವಲ ಎರಡು ದಿನ ಮಾತ್ರ ಇರುತ್ತಾರೆ ಅಷ್ಟರೊಳಗಾಗಿ ನೀವು ಹಣ ಕೊಟ್ಟರೆ ಪರಿಹಾರಧನ ಕೊಡಿಸುವುದಾಗಿ ನನಗೆ ತಿಳಿಸಿದರು. ಆದ್ದರಿಂದ ನಾನು ರೂ.**6** ಲಕ್ಷವನ್ನು ಸಾಲವಾಗಿ ಪಡೆದುಕೊಂಡು ಅದನ್ನು ನನ್ನ ಬ್ಯಾಂಕ್ ಅಕೌಂಟಿನಲ್ಲಿ ಜಮಾ ಮಾಡಿಸಿ ನನಗೆ ಲಂಚ ಕೊಡಲು ಇಷ್ಟವಿಲ್ಲದೇ ಇದ್ದ ಕಾರಣ ಆ ಹಣವನ್ನು ಡ್ರಾ ಮಾಡಿಕೊಂಡು ಎಸಿಬಿ ಕಛೇರಿಗೆ ಬೆಳಗ್ಗೆ **11.30** ಗಂಟೆಗೆ ಬಂದೆ. ಆ ಕಛೇರಿಯಲ್ಲಿ ನಾನು ಮನ್ಸೂರ್ ಹಾಗೂ ಶಿವಶಂಕರಪ್ಪ ಇವರ ಮೂಲಕ ಮೋಹನ್ ಕುಮಾರ್ ಹಾಗೂ ವೀರೇಶ್ ಕುಮಾರ್ ಇವರುಗಳು ಲಂಚವನ್ನು ಕೇಳುತ್ತಿದ್ದಾರೆಂದು ತಿಳಿಸಿದೆ ಮತ್ತು ಆ ಬಗ್ಗೆ ದೂರನ್ನು ಕೂಡಾ ನೀಡಿದೆ. ಅಲ್ಲದೇ ಮನ್ಸೂರ್ ಹಾಗೂ ಶಿವಶಂಕರಪ್ಪ ನನ್ನ ಜೊತೆಗೆ ಮಾತನಾಡಿದ ಬಗ್ಗೆ ಧ್ವನಿಮುದ್ರಿಕೆಗಳನ್ನು ನೀಡಿದೆ. ನಾನು ನೀಡಿದ ದೂರನ್ನು ನೋಡುತ್ತಿದ್ದು ಅದನ್ನು ನಿಪಿ–**1** ಎಂದು ನನ್ನ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು. ನಾನು ದೂರು ಕೊಟ್ಟ ಬಳಿಕ ಪೊಲೀಸರು ಕೆಲವರು ಬರಬೇಕು ಎಂದು ಹೇಳಿ ನನಗೆ ತಮ್ಮ ಕಛೇರಿಯಲ್ಲಿ ಕೂಡಲಿಕ್ಕೆ ಹೇಳಿದರು.

**5.** ಮುಂದೆ ಮದ್ಯಾಹ್ನ **1.00** ರ ಸುಮಾರಿಗೆ ವಿನಯ್ ಕುಮಾರ್ ಹಾಗೂ ರಾಕೇಶ್ ಕುಮಾರ್ ಅಂದರೆ ಚಾಸಾ–**2** ಹಾಗೂ **3** ಇವರುಗಳು ಎಸಿಬಿ ಕಛೇರಿಗೆ ಬಂದರು. ಅವರಿಬ್ಬರಿಗೂ ಎಸಿಬಿ ಪೊಲೀಸರು ನನ್ನನ್ನು ಪರಿಚಯಿಸಿ ನಾನು ನೀಡಿದಂತಹ ದೂರಿನ ಪ್ರತಿಯನ್ನು ಅವರಿಗೆ ಕೊಟ್ಟರು. ಆಗ ಸದರಿ ವಿನಯ್ ಹಾಗೂ ರಾಕೇಶ್ ಮತ್ತು ಎಸಿಬಿ ಪೊಲೀಸರು ನಾನು ಹಣ ಜೋಡಿಸಿಕೊಂಡು ತೆಗೆದುಕೊಂಡು ಬಂದ ಬಗ್ಗೆ ನನ್ನನ್ನು ವಿಚಾರಿಸಿದರು. ಆ ಹಣವನ್ನು ನಾನು ರಾಕೇಶ್ ಮತ್ತು ವಿನಯ್ ಇವರಿಗೆ ಎಸಿಬಿ ಪೊಲೀಸರ ಸಮಕ್ಷಮ ಕೊಟ್ಟೆ. ಅವರು ಆ ಹಣವನ್ನು ಪರಿಶೀಲಿಸಿದರು. ಆ ಹಣವನ್ನು ಪರಿಶೀಲಿಸಿದ ನಂತರ ರಾಕೇಶ್ ಇವರ ಕೈಗಳನ್ನು ತೊಳೆಯಲಾಯಿತು. ಆಗ ಆ ದ್ರಾವಣದಲ್ಲಿ ಯಾವುದೇ ಬಣ್ಣ ಬರಲಿಲ್ಲ. ಆ ದ್ರಾವಣದ ಬಾಟಲನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **1** ಎಂದು ಗುರುತಿಸಲಾಯಿತು. ನಂತರ ಎಸಿಬಿ ಪೊಲೀಸರು ನೋಟುಗಳಿಗೆ ಪೌಡರನ್ನು ಹಾಕಿದರು. ತದ ನಂತರ ಮತ್ತೆ ಅವರು ರಾಕೇಶ್ ಇವರ ಕೈಗಳನ್ನು ತೋಳೆಸಿದರು. ಆ ಪೌಡರ್ ಹಾಕಿದ ನಂತರ ರಾಕೇಶ್ ಮತ್ತೆ ನೋಟುಗಳನ್ನು ಎಣಿಸಿದ್ದರು. ಕಾರಣ ಆತನ ಕೈಗಳನ್ನು ಮತ್ತೆ ತೊಳೆಸಿದಾಗ ದ್ರಾವಣದಲ್ಲಿ ಬಣ್ಣ ಬಂತು. ಸದರಿ ಬಣ್ಣದ ದ್ರಾವಣದ ಮಾದರಿ ಬಾಟಲನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **2** ಎಂದು ಗುರುತಿಸಲಾಯಿತು. ಆ ನೋಟುಗಳ ನಂಬರುಗಳನ್ನು ರಾಕೇಶ್ ಹೇಳುತ್ತಾ ಹೋದರು, ಅವುಗಳನ್ನು ವಿನಯ್ ಬರೆದುಕೊಂಡರು. ಅವು ರೂ.**2000/–** ಮುಖ ಬೆಲೆಯ **300** ನೋಟುಗಳು ಇದ್ದವು. ಅವುಗಳ ನಂಬರುಗಳನ್ನು ಬರೆದುಕೊಂಡ ನಂತರ ಆ ಎಲ್ಲಾ ನೋಟುಗಳನ್ನು ಒಂದು ಕವರಿನಲ್ಲಿ ಹಾಕಿ ನನ್ನ ಬ್ಯಾಗಿನಲ್ಲಿ ಇಟ್ಟುಕೊಳ್ಳಲು ಕೊಟ್ಟರು. ತದ ನಂತರ ಅಲ್ಲಿ ನಾನು ಯಾವ ತರಹ ಮಾಡಬೇಕು ಎಂದು ತಿಳಿಸಿ ಒಂದು ರೆಕಾರ್ಡರನ್ನು ನನಗೆ ಕೊಟ್ಟರು. ಅಲ್ಲದೇ ವಿನಯ್ ಗೂ ಕೂಡಾ ನನ್ನೊಂದಿಗೆ ಹೋಗುವಂತೆ ತಿಳಿಸಿದರು. ಆ ಪ್ರಕ್ರಿಯೆ ಮುಗಿಯುವಷ್ಟರಲ್ಲಿ ಸುಮಾರು **5.00** ಗಂಟೆಯಾಗಿತ್ತು. ಆಗ ಪಂಚನಾಮೆಯನ್ನು ಮಾಡಿ ಪೊಟೋಗಳನ್ನು ತೆಗೆಯಲಾಯಿತು. ನಾನು ಸ್ವತಃ ಹೇಳುತ್ತೇನೆ ದಿನಾಂಕ **25–08–2021** ರಂದು ರಾಷ್ಟ್ರೀಯ ಹೆದ್ದಾರಿ ಕಛೇರಿಗೆ ಹೋಗಿ ಬೇಟಿಯಾಗಿದ್ದು ಈ ಮೊದಲು ನಾನು ಸ್ವಲ್ಪ ಗೊಂದಲದಿಂದ ಬೇರೆ ತಿಂಗಳನ್ನು ಹೇಳಿದ್ದೇನೆ. ಆಗ ತೆಗೆಯಲಾದ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ–**2** ರಿಂದ **20** ಎಂದು ಶ್ರೀ ಜಿ.ಎನ್ ವಕೀಲರ ಆಕ್ಷೇಪಣೆಗೊಳಪಟ್ಟು ಗುರುತಿಸಲಾಯಿತು. ಅಲ್ಲಿ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**21** ಎಂದು ನನ್ನ ಸಹಿಯನ್ನು ನಿಪಿ–**21**(ಎ) ಎಂದು ಗುರುತಿಸಲಾಯಿತು.

**6.** ತದ ನಂತರ ನಾನು, ವಿನಯ್ ಕುಮಾರ್, ಪೊಲೀಸರು ಎಲ್ಲರೂ ಜೊತೆಯಲ್ಲಿ ಹಿರಿಯೂರಿಗೆ ಗಾಡಿಯಲ್ಲಿ ಹೋದೆವು. ನಾನು ಅಲ್ಲಿಗೆ ಹೋಗುವಾಗ ನನಗೆ ನನ್ನ ಮಗ ಮನೋಜ್ ಕುಮಾರ್ ಪೋನ್ ಮಾಡಿ ಸದರಿ ಮನ್ಸೂರ್ ನಮ್ಮ ಮನೆಯ ಹತ್ತಿರ ಬಂದ ಬಗ್ಗೆ

ನನಗೆ ತಿಳಿಸಿದ. ಆಗ ನಾನು ಬರುತ್ತಿದ್ದೇವೆ ಕಾರಣ ಅವರಿಗೆ ಕಾಯಲು ಹೇಳುವಂತೆ ತಿಳಿಸಿದೆ. ಮುಂದೆ ನಮ್ಮ ವಾಹನವನ್ನು ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ ವಿನಯ್ ಕುಮಾರ್ ಇವರನ್ನು ನನ್ನ ಜೊತೆಗೆ ನಮ್ಮ ಮನೆ ಕಡೆಗೆ ಕಳುಹಿಸಿಕೊಡಲಾಯಿತು. ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ವಿನಯ್ ಕುಮಾರ್ ನಿಂತುಕೊಂಡು ಗಮನಿಸುತ್ತಿದ್ದರು. ನಾನು ನಮ್ಮ ಮನೆಯ ಒಳಗೆ ಹೋದೆ. ಮನೆಯಲ್ಲಿ ಮನ್ಸೂರ್ ಇದ್ದ. ಆತ ಹಣ ಇದೆಯಾ ಎಂದು ನನಗೆ ವಿಚಾರಿಸಿದ. ನಾನು ಹಣವನ್ನು ಜೊಡಿಸಿದ್ದಾಗಿ ತಿಳಿಸಿದೆ. ನಾನು ಆತನಿಗೆ ಆ ರೂ.**6** ಲಕ್ಷವನ್ನು ನೀಡಿದೆ. ನಮ್ಮ ಮನೆಯಲ್ಲಿಯೇ ಕುಳಿತುಕೊಂಡು ಸದರಿ ಮನ್ಸೂರ್ ಮೋಹನ್ ಕುಮಾರನಿಗೆ ಕರೆ ಮಾಡಿದರು. ಆದರೆ ಮೋಹನ್ ಕುಮಾರ್ ಆ ಕರೆಯನ್ನು ಸ್ವೀಕರಿಸಲಿಲ್ಲ. ತದ ನಂತರ ಸದರಿ ಮನ್ಸೂರ್ ವೀರೇಶ್ ಕುಮಾರ್ ಇವರಿಗೆ ಫೋನ್ ಮಾಡಿದರು. ಅವರ ಕರೆಯನ್ನು ವಿರೇಶ್ ಕುಮಾರ್ ಸ್ವೀಕರಿಸಿದರು, ಆಗ ಮನ್ಸೂರ್ ಹಣವನ್ನು ನೇತ್ರ ಜೊಡಿಸಿಕೊಟ್ಟಿದ್ದಾರೆ ಮೋಹನ್ ಕುಮಾರ್ ಇವರಿಗೆ ಕರೆ ಮಾಡುತ್ತಿದ್ದೇನೆ ಅವರು ಸ್ವೀಕರಿಸುತ್ತಿಲ್ಲ ಎಂದು ವೀರೇಶ್ ಇವರಿಗೆ ತಿಳಿಸಿದರು. ಆಗ ವೀರೇಶ್ ನಾನು ಮೋಹನ್ ಇವರಿಗೆ ತಿಳಿಸುತ್ತೇನೆ ಆ ಹಣವನ್ನು ಮೋಹನ್ ರವರಿಗೆ ತಲುಪಿಸುವಂತೆ ತಿಳಿಸಿದರು. ಅದಾದ **2** ನಿಮಿಷಗಳ ನಂತರ ಮೋಹನ್ ಇವರು ಮನ್ಸೂರ್ ಇವರಿಗೆ ಕರೆ ಮಾಡಿದರು. ಆಗ ಮನ್ಸೂರ್ ಕೇವಲ ರೂ.**5** ಲಕ್ಷ ಜೊಡಿಸಿದ್ದಾರೆ ಎಂದು ಮೋಹನ್ ಗೆ ತಿಳಿಸಲಾಗಿ ಯಾಕೆ ಎಂದು ಆತ ಕೇಳಿದ. ಉಳಿದ ಹಣವನ್ನು ಆ ನಂತರ ನೀಡುವುದಾಗಿ ನಾನು ತಿಳಿಸಿದ್ದೇನೆ ಎಂದು ಮನ್ಸೂರ್ ಅವರಿಗೆ ಹೇಳಿದ. ಆಗ ಮೋಹನ್ ಆಯಿತು ಆ ಹಣವನ್ನು ಮನೆ ಹತ್ತಿರ ತೆಗೆದುಕೊಂಡು ಬರುವಂತೆ ಮನ್ಸೂರ್ ಗೆ ತಿಳಿಸಿದರು. ಆಗ ಮನ್ಸೂರ್ ಆ ಪ್ಯಾಕೇಟನ್ನು ಬಿಚ್ಚಿ ಅದರಲ್ಲಿ ರೂ.**5** ಲಕ್ಷವನ್ನು ಪ್ರತ್ಯೇಕ ಮಾಡಿ ಉಳಿದ ಒಂದು ಲಕ್ಷ ರೂಪಾಯಿಯಲ್ಲಿ ರೂ.**30** ಸಾವಿರವನ್ನು ಪ್ರತ್ಯೇಕವಾಗಿಟ್ಟುಕೊಂಡು ಇನ್ನುಳಿದ ರೂ.**70** ಸಾವಿರವನ್ನು ನನ್ನ ಹತ್ತಿರವೇ ಬಿಟ್ಟು ನಾನು ಅವರಿಗೆ ಹೇಳುತ್ತೇನೆಂದು ತಿಳಿಸಿದರು. ನಂತರ ಒಟ್ಟು ರೂ.**5,30,000/-**ಗಳನ್ನು ತೆಗೆದುಕೊಂಡು ತನ್ನ ಪ್ಯಾಂಟಿನ ಬಲ ಜೇಬಿನಲ್ಲಿಟ್ಟುಕೊಂಡು ಮನೆಯಿಂದ ಹೊರಗೆ ಬಂದು ತನ್ನ ಬೈಕ್ ಬಳಿ ಬಂದ. ಆಗ ನಾನು ವಿನಯ್ ಕುಮಾರ್ ರವರಿಗೆ ಸೂಚನೆಯನ್ನು ನೀಡಿದೆ.

7. ಬೈಕ್ ಮೇಲೆ ಮನ್ಸೂರ್ ಮೋಹನ್ ಕುಮಾರ್ ಇವರ ಮನೆ ಬಳಿ ಹೊರಟಿದ್ದು ಆ ಬೈಕ್ ನ ಹಿಂದೆ ವಿನಯ್ ಕುಮಾರ್, ಪೊಲೀಸರು ಹಾಗೂ ನಾನೂ ಕೂಡಾ ಹೋದೆವು. ಮೋಹನ್ ಕುಮಾರ್ ಇವರ ಮನೆ ಬಳಿ ಸ್ವಲ್ಪ ದೂರದಲ್ಲಿ ನಿಂತುಕೊಂಡು ನಾವು ಗಮನಿಸುತ್ತಿದ್ದೆವು. ಮೋಹನ್ ಕಮಾರ್ ಇವರ ಮನೆಯಲ್ಲಿ ಒಳಗೆ ಹೋಗಿ ಮನ್ಸೂರ್ ಹಣ ಕೊಟ್ಟು ಹೊರಗೆ ಬರುತ್ತಿದ್ದಂತೆ ನಾವು ಆ ಮನೆಯ ಗೇಟ್ ಬಳಿ ಹೋದೆವು. ಅಲ್ಲಿ ನಾನು ಎಸಿಬಿ ಪೊಲೀಸರಿಗೆ ಇವರೇ ಮೋಹನ್ ಹಾಗೂ ಮನ್ಸೂರ್ ಎಂದು ಅವರಿಗೆ ತಿಳಿಸಿದೆ. ಎಸಿಬಿ

ಪೊಲೀಸರು ಕೂಡಾ ತಮ್ಮನ್ನು ಅವರಿಗೆ ಪರಿಚಯಿಸಿಕೊಂಡರು ಮತ್ತು ಕೊಟ್ಟಿರುವ ದುಡ್ಡನ್ನು ಎಲ್ಲಿ ಇಟ್ಟಿದ್ದೀರಿ ಎಂದು ಅವರಿಗೆ ಕೇಳಿದರು. ಮೋಹನ್ ಕುಮಾರ್ ತಮ್ಮ ಮನೆಯ ಒಳಗೆ ಸೋಫಾದ ಮೇಲೆ ಆ ಹಣವನ್ನು ಇಟ್ಟಿದ್ದರು. ಅದನ್ನು ಆತ ಎಸಿಬಿ ಪೊಲೀಸರಿಗೆ ಕೊಟ್ಟ. ನಂತರ ಎಸಿಬಿ ಪೊಲೀಸರು ಮೋಹನ್ ಈತನನ್ನು ವಿಚಾರಿಸಲಾಗಿ ಅವಾರ್ಡ್ ನೋಟೀಸ್ ಗೆ ಸಂಬಂಧಿಸಿದಂತೆ ಸಾಹೇಬರು ಹೇಳಿದ ಹಾಗೆ ಹಣ ಪಡೆದಿರುವುದಾಗಿ ಮೋಹನ್ ತಿಳಿಸಿದ. ಎಸಿಬಿ ಪೊಲೀಸರು ಮನ್ಸೂರ್ ಹಾಗೂ ಮೋಹನ್ ಇಬ್ಬರ ಕೈಗಳನ್ನು ಕೂಡಾ ಪ್ರತ್ಯೇಕವಾಗಿ ತೋಳೆಸಿದರು. ಮನ್ಸೂರ್ ಗೆ ನಮ್ಮ ಮನೆಯಲ್ಲಿ ಹಣ ಕೊಡುವ ಕಾಲಕ್ಕೆ ಅದನ್ನು ವಿಡಿಯೋ ಮಾಡಿಕೊಳ್ಳಲಾಗಿದ್ದು ಅದನ್ನು ಕೂಡಾ ಪೊಲೀಸರಿಗೆ ಕೊಟ್ಟಿದ್ದೇನೆ. ಅವರಿಬ್ಬರ ಕೈಗಳನ್ನು ತೊಳೆಸಿದಾಗ ದ್ರಾವಣದಲ್ಲಿ ಕಲರ್ ಬಂತು. ಮನ್ಸೂರ್ ಇವರ ಕೈಗಳನ್ನು ತೋಳೆಸಿದ ದ್ರಾವಣಗಳನ್ನು ನೋಡುತ್ತಿದ್ದು ವಸ್ತು ಸಂ.**6** ಬಾಟಲಿಯನ್ನು ಮುದ್ದೆ ಮಾಲು **3** ಎಂದು ಹಾಗೂ ವಸ್ತು ಸಂ.**7** ಬಾಟಲಿಯನ್ನು ಮುದ್ದೆ ಮಾಲು **4** ಎಂದು ಗುರುತಿಸಲಾಯಿತು. ಮೋಹನ್ ಇವರ ಕೈಗಳನ್ನು ತೊಳೆಸಿದ ಮಾದರಿ ದಾವಣಗಳ ಬಾಟಲುಗಳನ್ನು ನೋಡುತ್ತಿದ್ದು ವಸ್ತು ಸಂ.**8** ಬಾಟಲಿಯನ್ನು ಮುದ್ದೆ ಮಾಲು **5** ಎಂದು ಹಾಗೂ ವಸ್ತು ಸಂ.**9** ಬಾಟಲಿಯನ್ನು ಮುದ್ದೆ ಮಾಲು **6** ಎಂದು ಗುರುತಿಸಲಾಯಿತು. ಮನ್ಸೂರ್ ಈತನಿಗೆ ಒಂದು ಲುಂಗಿಯ ವ್ಯವಸ್ಥೆ ಮಾಡಿ ಆತನ ಪ್ಯಾಂಟಿನ ಬಲ ಭಾಗವನ್ನು ತೊಳೆಸಿದರು. ಆಗ ಆ ದ್ರಾವಣದ ಬಣ್ಣ ಕೂಡಾ ಬದಲಾಯಿತು. ರೂ.**5** ಲಕ್ಷ ಹಾಗೂ ರೂ.**30** ಸಾವಿರಗಳನ್ನು ಆತ ಪ್ರತ್ಯೇಕವಾಗಿ ಇಟ್ಟುಕೊಂಡಿದ್ದರಿಂದ ಆತನ ಪ್ಯಾಂಟಿನ್ನು ತೊಳೆದಾಗ ದ್ರಾವಣದ ಬಣ್ಣ ಬದಲಾಯಿತು. ಮನ್ಸೂರ್ ಇವರ ಪ್ಯಾಂಟನ್ನು ತೊಳೆದ ದ್ರಾವಣಗಳನ್ನು ನೋಡುತ್ತಿದ್ದು ವಸ್ತು ಸಂ.**13** ಇದ್ದು ಸದರಿ ಬಾಟಲಿಯನ್ನು ಮುದ್ದೆ ಮಾಲು **7** ಎಂದು ಗುರುತಿಸಲಾಯಿತು. ಆ ದಿನ ತೊಳೆಸಲಾದ ಆತನ ಪ್ಯಾಂಟನ್ನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ ಒಂದು ಕವರನ್ನು ಆರೋಪಿತರ ಪರ ವಕೀಲರಾದ ಶ್ರೀ ಎನ್.ಜಿ.ಕೆ ಹಾಗೂ ಶ್ರೀ ಹೆಚ್.ಎಂ.ಎನ್ ರವರ ಸಮಕ್ಷಮ ತೆರೆಯಲಾಯಿತು)

ಸದರಿ ವಸ್ತು ಸಂಖ್ಯೆ:**14** ನ್ನು ಮುದ್ದೆ ಮಾಲು **8** ಎಂದು ಗುರುತಿಸಲಾಯಿತು. ಮೋಹನ್ ಕುಮಾರ್ ಇವರಿಂದ ವಶಪಡಿಸಿಕೊಂಡ ಹಣವನ್ನು ನೋಡಿದರೆ ಗುರುತಿಸಬಲ್ಲೆ. ಆ ಬಗ್ಗೆ ವಸ್ತು ಸಂ.**11** ನ್ನು ನೋಡುತ್ತಿದ್ದು ಸದರಿ ಹಣವನ್ನು ಮೋಹನ್ ಕುಮಾರ್ ಇವರಿಂದ ವಶಪಡಿಸಿಕೊಂಡಿದ್ದು ಅದನ್ನು ಮುದ್ದೆ ಮಾಲು **9** ಎಂದು ಗುರುತಿಸಲಾಯಿತು. ವಸ್ತು ಸಂ.**10** ರಲ್ಲಿಯ ಹಣವನ್ನು ಮನ್ಸೂರ್ ಇವರಿಂದ ವಶಪಡಿಸಿಕೊಂಡಿದ್ದು ಅದನ್ನು ಮುದ್ದೆ ಮಾಲು **10** ಎಂದು ಗುರುತಿಸಲಾಯಿತು. ನನ್ನ ಬಳಿ ಬಿಟ್ಟಂತಹ ರೂ.**70** ಸಾವಿರದ ಲಕೋಟೆಯನ್ನು ಅಂದರೆ ವಸ್ತು ಸಂ.**12** ನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **11** ಎಂದು ಗುರುತಿಸಲಾಯಿತು.

(ಮುದ್ದೆ ಮಾಲು **9** ರಿಂದ **11** ಇವುಗಳ ಹಣವನ್ನು ಸೀಲಾದ ಲಕೋಟೆಗಳಲ್ಲಿ ಇಡಲಾಗಿರುತ್ತದೆ). ಮನ್ಸೂರ್ ಮೋಹನ್ ಕುಮಾರ್ ಇವರ ಮನೆ ಒಳಗೆ ಹೋದಾಗ ಮೋಹನ್ ಕುಮಾರ್ ವಿರೇಶ್ ಇವರಿಗೆ ಫೋನ್ ಮಾಡಿದ್ದು ಆ ಕರೆಯನ್ನು ಸ್ವೀಕರಿಸಿದ ವಿರೇಶ್ ಇವರಿಗೆ ಮೋಹನ್ ಹಣ ಬಂದಿದೆ ಎಂದು ತಿಳಿಸಿದರು. ಆಗ ವಿರೇಶ್ ಆ ಕರೆಯನ್ನು ಕತ್ತರಿಸಿ ಮತ್ತೆ ವ್ಯಾಟ್ಸ್ ಆ್ಯಪ್ ಕರೆಯ ಮೂಲಕ ಮೋಹನ್ ಇವರೊಂದಿಗೆ ಮಾತನಾಡಿದರು.

ಈಗ ವಿರಾಮದ ವೇಳೆಯಾದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು **2** ನೇ ಅವಧಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ವಿರಾಮದ ನಂತರ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

**8**. ಬರೆದುಕೊಂಡಂತಹ ನೋಟುಗಳ ನಂಬರುಗಳನ್ನು ವಿನಯ್ ಕುಮಾರ್ ಹಾಗೂ ರಾಕೇಶ್ ಪರಿಶೀಲಿಸಿ ಖಚಿತಪಡಿಸಿಕೊಂಡರು. ಅಲ್ಲದೇ ನನ್ನ ಬಳಿ ಇದ್ದಂತಹ ರೇಕಾರ್ಡರಿನಲ್ಲಿಯ ಸಂಭಾಷಣೆಯ ಮೆಮೋರಿ ಕಾರ್ಡನ್ನು ಕೂಡಾ ಪೊಲೀಸರು ಪಡೆದರು. ಅಲ್ಲಿ ಟೈಪ್ ಮಾಡಲು ವ್ಯವಸ್ಥೆ ಇಲ್ಲದೇ ಇದ್ದ ಕಾರಣ ನಮ್ಮೆಲ್ಲರನ್ನೂ ಹಾಗೂ ಮನ್ಸೂರ್, ಮೋಹನ್ ಕುಮಾರ್ ಇವರನ್ನು ರಾಷ್ಟ್ರೀಯ ಹೆದ್ದಾರಿ ಕಛೇರಿಗೆ ಕರೆದುಕೊಂಡು ಹೋದರು. ಅಲ್ಲಿ ಮೋಹನ್ ಕುಮಾರ್, ಮನ್ಸೂರ್ ಹಾಗೂ ನಾವು ಆ ಕಛೇರಿಯಲ್ಲಿ ಹೋದಾಗ ಮನ್ಸೂರ್ ಈತ ವಿರೇಶ್ ಕುಮಾರ್ ಇವರ ಪರಿಚಯವನ್ನು ಪೊಲೀಸರಿಗೆ ಮಾಡಿಸಿದ. ಸದರಿ ವಿರೇಶ್ ಕುಮಾರ್ ಇವರನ್ನು ಪೊಲೀಸರು ನನ್ನ ಪೈಲಿನ ಬಗ್ಗೆ ವಿಚಾರಿಸಿದಾಗ ತಮ್ಮ ಕಛೇರಿಯ ಕಪಾಟಿನಲ್ಲಿಂದ ನನ್ನ ಪೈಲನ್ನು ವಿರೇಶ್ ಕುಮಾರ್ ಹಾಜರುಪಡಿಸಿದ. ಎಸಿಬಿ ಪೊಲೀಸರು ಆ ಪೈಲನ್ನು ತೆಗೆದುಕೊಂಡರು. ಅದನ್ನು ತೋರಿಸಿ ನನಗೆ ವಿಚಾರಿಸಿದಾಗ ನಾನು ಅದನ್ನು ಗುರುತಿಸಿದೆ. ಈಗ ನಾನು ನೋಡುತ್ತಿರುವಂತಹ ಸರ್ವೆ ನಂ.**13** ರ ಪೈಲ್ ನಾನು ಒದಗಿಸಿದಂತಹ ದಾಖಲೆಗಳ ನಿಜಪ್ರತಿಗಳ ಪೈಲ್ ಇದ್ದು ಅದನ್ನು ನಿಪಿ–**22** ಎಂದು ಗುರುತಿಸಲಾಯಿತು. (ಅದರಲ್ಲಿ **22** ಹಾಳೆಗಳು ಇರುತ್ತವೆ). ಅದೇ ರೀತಿ ಈಗ ನೋಡುತ್ತಿರುವಂತಹ **19** ಹಾಳೆಗಳ ಸರ್ವೆ ನಂ.**372/1** ರ ನಿಜಪ್ರತಿಗಳ ಪೈಲನ್ನು ನೋಡುತ್ತಿದ್ದು

ಅದನ್ನು ನಿಪಿ–**23** ಎಂದು ಗುರುತಿಸಲಾಯಿತು. ನಾನು ನೀಡಿದಂತಹ ಮೆಮೋರಿ ಕಾರ್ಡನ್ನು ನೋಡುತ್ತಿದ್ದು ಅದು ವಸ್ತು ಸಂ.**1** ಇದ್ದು ಅದನ್ನು ಮುದ್ದೆ ಮಾಲು **12** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ ಒಂದು ಕವರನ್ನು ಆರೋಪಿತರ ಪರ ವಕೀಲರಾದ ಶ್ರೀ ಎನ್.ಜಿ.ಕೆ ಹಾಗೂ ಶ್ರೀ ಹೆಚ್.ಎಂ.ಎನ್ ರವರ ಸಮಕ್ಷಮ ತೆರೆಯಲಾಯಿತು)

**9**. ನಂತರ ನನ್ನ, ಮೋಹನ್, ಮನ್ಸೂರ್, ವಿರೇಶ್ ಇವರುಗಳ ಧ್ವನಿಗಳನ್ನು ಕೇಳಿಸಿಕೊಂಡು ಪರೀಕ್ಷಿಸಿದರು. ಅಲ್ಲದೇ ನಮ್ಮ ಧ್ವನಿಗಳನ್ನು ಕೂಡಾ ರೆಕಾರ್ಡ್ ಮಾಡಿಕೊಂಡರು. ಆ ಧ್ವನಿಗಳನ್ನು ಸಿಡಿಯಂತಹ ವಸ್ತುವಿನಲ್ಲಿ ಪಡೆದರು. ಅವುಗಳನ್ನು ನೋಡುತ್ತಿದ್ದು ಅವು ವಸ್ತು ಸಂ.**15** ರಿಂದ **18** ರಲ್ಲಿ ಇದ್ದು ವಿರೇಶ್ ಇವರಿಗೆ ಸಂಬಂಧಿಸಿದ ಧ್ವನಿಮುದ್ರಣದ ಸಿಡಿಯನ್ನು ಮುದ್ದೆ ಮಾಲು **13** ಎಂದು, ಮೋಹನ್ ಇವರಿಗೆ ಸಂಬಂಧಿಸಿದ ಧ್ವನಿಮುದ್ರಣದ ಸಿಡಿಯನ್ನು ಮುದ್ದೆ ಮಾಲು **14** ಎಂದು, ಮನ್ಸೂರ್ ಇವರಿಗೆ ಸಂಬಂಧಿಸಿದ ಧ್ವನಿಮುದ್ರಣದ ಸಿಡಿಯನ್ನು ಮುದ್ದೆ ಮಾಲು **15** ಎಂದು ಹಾಗೂ ನನ್ನ ಸಂಭಾಷಣೆಯ ಧ್ವನಿಮುದ್ರಣದ ಸಿಡಿಯನ್ನು ಮುದ್ದೆ ಮಾಲು **16** ಎಂದು ಗುರುತಿಸಲಾಯಿತು. ಅದೇ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಚರಣ್ ಎನ್ನುವವರನ್ನು ಕರೆಸಿ ಎಲ್ಲರ ಧ್ವನಿಗಳನ್ನು ಕೇಳಿಸಿದಾಗ ಆತ ಅವುಗಳನ್ನು ಗುರುತಿಸಿದ. ಮನ್ಸೂರ್ ಇವರಿಗೆ ಸಂಬಂಧಿಸಿದ ಸಿಡಿಯನ್ನು ಮುದ್ದೆ ಮಾಲು **17** ಎಂದು ಹಾಗೂ ವಿರೇಶ್ ಇವರು ಮೋಹನ್ ರವರೊಂದಿಗೆ ಮಾತನಾಡಿದ ಸಂಭಾಷಣೆಯ ಸಿಡಿಯನ್ನು ಮುದ್ದೆ ಮಾಲು **18** ಎಂದು ಗುರುತಿಸಲಾಯಿತು. ಎಲ್ಲಾ ದಾಖಲೆಗಳನ್ನು ಪಡೆದು, ಟೈಪಿಂಗ್ ಮಾಡಿ ಎಲ್ಲಾ ಪ್ರಕ್ರಿಯೆ ಮುಗಿಯುವ ಕಾಲಕ್ಕೆ ಬೆಳಗಿನ ಜಾವ **5.00** ಗಂಟೆಯಾಯಿತು. ಆ ಟೈಪ್ ಮಾಡಿದ ದಾಖಲೆಯನ್ನು ತೋರಿಸಿ ಅದು ಸರಿಯಾಗಿದೆಯೋ ಇಲ್ಲವೋ ಎಂದು ಕೇಳಿ ನನ್ನ ಸಹಿಯನ್ನು ಪಡೆದಿದ್ದು ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**24** ಎಂದು ನನ್ನ ಸಹಿಯನ್ನು ನಿಪಿ–**24**(ಎ) ಎಂದು ಗುರುತಿಸಲಾಯಿತು. ಅವರ ಕಛೇರಿಯಲ್ಲಿಯ ಇನೋರ್ವರಿಗೆ ಬರಲು ಎಸಿಬಿ ಪೊಲೀಸರು ಹೇಳಿದರು, ಅವರು ಬರಲಾಗುವುದಿಲ್ಲ ಎಂದು ತಿಳಿಸಿದರು. ಈಗ ನನಗೆ ತೋರಿಸಲಾದ ಪೊಟೋಗಳಲ್ಲಿ ನಾವು, ವಿರೇಶ್ ಕುಮಾರ್, ಮೋಹನ್ ಹಾಗೂ ಮನ್ಸೂರ್ ಇದ್ದು ಸದರಿ ಪೊಟೋಗಳನ್ನು ನಿಪಿ–**25** ರಿಂದ **37** ಎಂದು ಶ್ರೀ ಜಿ.ಎನ್ ವಕೀಲರ ಆಕ್ಷೇಪಣೆಗೊಳಪಟ್ಟು ಗುರುತಿಸಲಾಯಿತು. ವಿರೇಶ್ ಕುಮಾರ್ ಇವರು ಕೆಎಎಸ್ ಅಧಿಕಾರಿಯಾಗಿದ್ದು ಭೂಸ್ವಾಧೀನ ಇಲಾಖೆಯಲ್ಲಿ ಮುಖ್ಯಸ್ಥರಾಗಿರುತ್ತಾರೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಮೋಹನ್ ಕುಮಾರ್ ಹಾಗೂ ಮನ್ಸೂರ್ ಇವರನ್ನು ಗುರುತಿಸುತ್ತೇನೆ. ಈ ಎಲ್ಲಾ ಕ್ರಮ ಜರುಗಿಸಿದ

ನಂತರ ಮನ್ಸೂರ್, ಮೋಹನ್ ಹಾಗೂ ವಿರೇಶ್ ಇವರನ್ನು ಪೊಲೀಸರು ಕರೆದುಕೊಂಡು ಬಂದರು. ಈ ವಿಚಾರವಾಗಿ ಎಸಿಬಿ ಪೊಲೀಸರು ನನ್ನ ಹೇಳಿಕೆಯನ್ನು ದಿನಾಂಕ **16–09–2021** ರಂದು ದಾಖಲಿಸಿಕೊಂಡಿದ್ದಾರೆ.

**<u>ಪಾಟೀ ಸವಾಲು:</u>** ಶ್ರೀ ಎನ್.ಜಿ.ಕೆ. ಮತ್ತು ಶ್ರೀ ಜಿ.ಎನ್. ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.